# ಹಾಸನ ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ
ಹೇಮಗಂಗೋತ್ರಿ, ಹಾಸನ-573226

ಇ-ಮೇಲ್ : reg.hassan.uni@gmail.com
ದೂರವಾಣಿ : 08172-220014

ಸಂಖ್ಯೆ : ಸಿಡಿಸಿ/ಸಂಯೋಜನೆ/ವಿವ-01/2025-26

ದಿನಾಂಕ : 02.07.2025

## "ಸಂಯೋಜನೆ ಮುಂದುವರಿಕೆ ಮಂಜೂರಾತಿ ಆದೇಶ"

**ವಿಷಯ :** 2025-26ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆ ಮುಂದುವರಿಸುವ ಬಗೆಗೆ.

**ಉಲ್ಲೇಖ :** 1) ಸ್ಥಳೀಯ ವಿಚಾರಣಾ ಸಮಿತಿ ಭೇಟಿ ನೀಡಿದ ದಿನಾಂಕ: 17.12.2024
2) ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ ದಿನಾಂಕ: 04.02.2025
3) ಸಿಂಡಿಕೇಟ್ ಸಭೆಯ ನಿರ್ಣಯದ ದಿನಾಂಕ: 28.05.2025

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000, ಪ್ರಕರಣ 59(17)ರ ಮೇರೆಗೆ ಸ್ಥಳೀಯ ವಿಚಾರಣಾ ಸಮಿತಿಯ ವರದಿಯಲ್ಲಿ ಸೂಚಿಸಿರುವ ಷರತ್ತುಗಳಿಗೆ ಒಳಪಟ್ಟು ಮತ್ತು ಅವುಗಳನ್ನು ಕಾರ್ಯಗತಗೊಳಿಸುವಂತೆ ಸೂಚಿಸಿ ಕೆಳಕಂಡ ಕಾಲೇಜಿಗೆ ಪಟ್ಟಿಯಲ್ಲಿ ಸೂಚಿಸಿರುವ ಕೋರ್ಸು/ವಿಷಯಗಳಿಗೆ 2025-26ನೇ ಸಾಲಿಗೆ ಮಾತ್ರ ಅನ್ವಯವಾಗುವಂತೆ ಪ್ರಾಧಿಕಾರಗಳ ಅನುಮೋದನೆಯೊಡನೆ ಶಾಶ್ವತ/ತಾತ್ಕಾಲಿಕ ಸಂಯೋಜನಾ ಮುಂದುವರಿಕೆಗೆ ಮಂಜೂರಾತಿ ಆದೇಶ ನೀಡಲಾಗಿದೆ.

**ಕಾಲೇಜಿನ ಹೆಸರು: ಜೆ.ಎಸ್.ಎಸ್ ಇನ್ಸ್ಟಿಟ್ಯೂಟ್ ಆಫ್ ಎಜುಕೇಶನ್, ಕಾಲೇಜು, ಸಕಲೇಶಪುರ, ಹಾಸನ ಜಿಲ್ಲೆ**

**ಮುಂದುವರಿಕೆ ಸಂಯೋಜನೆ:**

| ಶಿಕ್ಷಣ | ವಿಷಯ ಸಮೂಹ | ವಿಭಾಗ | ಒಟ್ಟು ಪ್ರವೇಶ ಮಿತಿ |
|---|---|---|---|
| ಬಿ.ಎಡ್ | ಕಡ್ಡಾಯ ವಿಷಯಗಳು | 02 | 100 |

ವಿ.ಸೂ. :

1. ಸಂಯೋಜನಾ ಮಂಜೂರಾತಿ ಆದೇಶದಲ್ಲಿ ನೀಡಿರುವ ಕೋರ್ಸು/ವಿಷಯ/ವಿಷಯ ಸಮೂಹಗಳಿಗೆ ನಿಗದಿಪಡಿಸಿರುವ ಪ್ರವೇಶಾತಿ ಸಂಖ್ಯೆಗೆ ಮಾತ್ರ ಪ್ರವೇಶ ಮಾಡಿಕೊಳ್ಳತಕ್ಕದ್ದು. ಸಂಯೋಜನಾ ಮಂಜೂರಾತಿ ಆದೇಶ ನೀಡದೇ ಸ್ಥಳೀಯ ವಿಚಾರಣಾ ಸಮಿತಿಯ ವರದಿಯಲ್ಲಿ ಹೊಸದಾಗಿ ಶಿಫಾರಸ್ಸು ಮಾಡದಿರುವ ಕೋರ್ಸು/ವಿಷಯ/ವಿಷಯ ಸಮೂಹಗಳಿಗೆ ಪ್ರವೇಶಾತಿ ಸಂಖ್ಯೆಯನ್ನು ಮೀರಿ ಪ್ರವೇಶ ಮಾಡಿಕೊಳ್ಳತಕ್ಕದ್ದಲ್ಲ.
2. ಸ್ಥಳೀಯ ವಿಚಾರಣಾ ಸಮಿತಿಯು ನೀಡಿರುವ ವರದಿಯಲ್ಲಿ ಶಿಫಾರಸ್ಸು ಮಾಡಿದ್ದರೂ/ಸರ್ಕಾರದ ಅನುಮೋದನೆ ದೊರೆತಿದ್ದರೂ ವಿಶ್ವವಿದ್ಯಾಲಯದ ಸಂಯೋಜನಾ ಮಂಜೂರಾತಿ ಆದೇಶ ಪಡೆಯದೇ ಯಾವುದೇ ಕೋರ್ಸು/ವಿಷಯ/ವಿಷಯ ಸಮೂಹಗಳಿಗೆ ಪ್ರವೇಶಾತಿ ಸಂಖ್ಯೆಯನ್ನು ಮೀರಿ ಪ್ರವೇಶ ಮಾಡಿಕೊಳ್ಳತಕ್ಕದ್ದಲ್ಲ. ಅಂತಹ ಸಂದರ್ಭದಲ್ಲಿ ಆಗಬಹುದಾದ ತೊಂದರೆಗಳಿಗೆ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂಬ ಅಂಶವನ್ನು ಗಮನಿಸತಕ್ಕದ್ದು.
3. ನೂತನವಾಗಿ ನೀಡಿದ ಪದವಿಗಳಿಗೆ ಮತ್ತು ಹೆಚ್ಚುವರಿಯಾಗಿ ಪ್ರವೇಶ ಮಿತಿಯನ್ನು ಪಡೆದ ಪದವಿ ವಿಷಯಗಳಿಗೆ ಸರ್ಕಾರ, ವಿಶ್ವವಿದ್ಯಾಲಯ ಮತ್ತು ಅನ್ವಯವಾಗುವ ಪ್ರಾಧಿಕಾರಗಳು ನೀಡಿದ ಷರತ್ತುಗಳನ್ನು ಕಡ್ಡಾಯವಾಗಿ ಪೂರೈಸತಕ್ಕದ್ದು.
4. ಸರ್ಕಾರ ಮತ್ತು ವಿಶ್ವವಿದ್ಯಾಲಯದ ನಿಯಮಾವಳಿಯಂತೆ ಜಿ.ಎಸ್.ಟಿ ಮತ್ತು ಇತರೆ ಶುಲ್ಕಗಳನ್ನು ಪಾವತಿಸಬೇಕಾದ ಸಂದರ್ಭದಲ್ಲಿ ಅಂತಹ ಶುಲ್ಕಗಳನ್ನು ಪಾವತಿಸುವ ನಿಯಮಕ್ಕೆ ಬದ್ಧರಾಗಿರತಕ್ಕದ್ದು.

ಪು.ತಿ.ನೋ

JSS Institute Of Education, Sakleshpura, Hassan Dist. No 153/25 Dt 7/7/25

ಸ್ಥಳೀಯ ವಿಚಾರಣಾ ಸಮಿತಿ ವಿಧಿಸಿರುವ ಷರತ್ತುಗಳು:

- Faculty members should involve in research activities
- Faculty members should be encouraged to attend conferences and seminars
- Eligible faculty members be appointed for Pedagogy of English, Mathematics, Commerce and Physical Education

ವಿಶ್ವವಿದ್ಯಾಲಯದ ಶೈಕ್ಷಣಿಕ ವೇಳಾಪಟ್ಟಿಯ ಪ್ರಕಾರ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದು. ವಿಶ್ವವಿದ್ಯಾನಿಲಯ ಹಾಗೂ ಸರ್ಕಾರದ ಷರತ್ತುಗಳನ್ನು 2025-26ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರಾರಂಭಕ್ಕೆ ಮುನ್ನ ತಪ್ಪದೇ ಪಾಲಿಸುವುದು ಮತ್ತು ಇದರ ಸಂಬಂಧ ಅಗತ್ಯ ದಾಖಲೆಗಳೊಡನೆ ಸಮರ್ಪಕ ಅನುಪಾಲನಾ ವರದಿಯನ್ನು ಒಂದು ತಿಂಗಳೊಳಗಾಗಿ ಕಾಲೇಜು ಅಭಿವೃದ್ಧಿ ಮಂಡಳಿ ಕಛೇರಿಗೆ ತಲುಪಿಸುವುದು. ಪರೀಕ್ಷಾ ನಿಯಮ/ಪ್ರವೇಶಾತಿ ಮತ್ತು ಮೀಸಲಾತಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

**ಬಿ.ಎ ಜಗದೀಶ ಕೆಎಎಸ್**
**ಕುಲಸಚಿವರು, ಹಾಸನ ವಿವಿ**

ಹಾಸನ ವಿಶ್ವವಿದ್ಯಾಲಯ ಹೇಮಗಂಗೋತ್ರಿ, ಹಾಸನ-573226

ಇವರಿಗೆ,

**ಪ್ರಾಂಶುಪಾಲರು,**
**ಜೆ.ಎಸ್.ಎಸ್. ಇನ್ಸ್ಟಿಟ್ಯೂಟ್ ಆಫ್ ಎಜುಕೇಶನ್**
**ಸಕಲೇಶಪುರ. ಹಾಸನ ಜಿಲ್ಲೆ.**

JSS Institute Of Education
No 153/2024
Dt 4/1/25
Sakleshpura, Hassan Dist.

**ಪ್ರತಿಗಳು:**

1. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಬಹುಮಹಡಿಗಳ ಕಟ್ಟಡ, ಡಾ. ಬಿ.ಆರ್.ಅಂಬೇಡ್ಕರ್‌ರಸ್ತೆ, ಬೆಂಗಳೂರು-560 001.
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560 001.
3. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560 001.
4. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಹುಣಸೂರು ರಸ್ತೆ, ಮೈಸೂರು.
5. ಕುಲಸಚಿವರು, ಹಾಸನ ವಿಶ್ವವಿದ್ಯಾಲಯ, ಹಾಸನ.
6. ಕುಲಸಚಿವರು (ಪರೀಕ್ಷಾಂಗ), ಹಾಸನ ವಿಶ್ವವಿದ್ಯಾಲಯ, ಹಾಸನ.
7. ಉಪಕುಲಸಚಿವರು (ಶೈಕ್ಷಣಿಕ), ಹಾಸನ ವಿಶ್ವವಿದ್ಯಾಲಯ, ಹಾಸನ.
8. ಕುಲಪತಿಗಳ/ಕುಲಸಚಿವರ ಆಪ್ತ ಸಹಾಯಕರು, ಹಾಸನ ವಿಶ್ವವಿದ್ಯಾಲಯ, ಹಾಸನ.
9. ಅಧೀಕ್ಷಕರು, ಸಿಡಿಸಿ/ಕಛೇರಿ ಪ್ರತಿ/ರಕ್ಷಾ ಕಡತಕ್ಕೆ.